**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 748/2017**

ಚಾಸಾಃ 9
ಪ್ರಾಸಾಃ 4

**ದಿನಾಂಕಃ 16-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಕಾಂತರಾಜು |
| ತಂದೆಯ/ಗಂಡನ ಹೆಸರು | : | ಬೋಡಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ |
| ವಾಸ ಸ್ಥಳ | : | ಮಧುಗಿರಿ |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ಸಾಕ್ಷಿಯನ್ನು ವಿಸಿ ಮುಖಾಂತರ ಹಾಜರು ಪಡಿಸಿರುತ್ತಾರೆ.

ನಾನು **2014** ರಿಂದ **2018** ರವೆರಗೂ ನಾನು ಕೆ.ಬಿ ಕ್ರಾಸ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **23-03-2017** ರಂದು ಮತ್ತು ದಿಃ **24-03-2017** ರಂದು ನನ್ನನ್ನು ಕೆ.ಬಿ ಕ್ರಾಸ್ ಸರ್ಕಲ್ ನಲ್ಲಿ ಕಾರಿನಲ್ಲಿ ಡ್ರಾಪ್ ಕೊಡುತೀನಿ ಎಂದು ಸಾರ್ವಜನಿಕರಿಂದ ಮೊಬೈಲ್ ಗಳು ಮತ್ತು ಹಣವನ್ನು ವಸೂಲಿ ಮಾಡುತ್ತಾರೆ ಎಂದು ಬಂದ ದೂರಿನ ಮೇರೆಗೆ ಚಾಸಾ-**11** ರವರು, ಚಾಸಾ-**10** ಮತ್ತು ಚಾಸಾ-**8** ರವರನ್ನು ನೇಮಕ ಮಾಡಿರುತ್ತಾರೆ. ಪ್ರತಿ ದಿನ ರಾತ್ರಿ **9** ಗಂಟೆಗೆ ಚೆಕ್ ಪಾಯಿಂಟನ್ನು ಹೋಗಿ ಚೆಕ್ ಪಾಯಿಂಟ್ ನಲ್ಲಿ ಬರುವ ವಾಹನಗಳನ್ನು ತಪಾಸಣೆ ಮಾಡುತ್ತಿದ್ದೆವು. ಬೆಳಗಿನ ಜಾವ ಸುಮಾರು **5** ಗಂಟೆಗೆ ಚಿಕ್ಕನಾಯಕನಹಳ್ಳಿಯಿಂದ ಒಂದು ಇಂಡಿಕಾ ಕಾರು ಬರುತ್ತಿತ್ತು. ಚಾಸಾ-**12** ರವರು ಬಂದಿರುವ ಕಾರಿನ ಸಂಖ್ಯೆ ಹಿಂದೆ ಒಂದು ಮುಂದೆ ಒಂದು ಇತ್ತು ಅದರ ಬಗ್ಗೆ ವಿಚಾರಣೆ ಮಾಡಲು ಕಾರಿನಲ್ಲಿದ್ದ **4** ವ್ಯಕ್ತಿಗಳನ್ನು ವಿಚಾರಿಸಿರುತ್ತಾರೆ. ಕಾರಿಗೆ ಸಂಬಂಧಪಟ್ಟಿರುವ ದಾಖಲಾತಿಗಳನ್ನು ಪರಿಶೀಲನೆ ಮಾಡಬೇಕು ಎಂದು ಕೇಳಿದಾಗ ಅವರು ಕೊಟ್ಟಿರುವುದಿಲ್ಲ. ಅವರನ್ನು ಹೆಚ್ಚಿನ ವಿಚಾರಣೆಗೋಸ್ಕರ ಕೆ.ಬಿ ಕ್ರಾಸ್ ಪೊಲೀಸ್ ಠಾಣೆಗೆ ಕರೆದುಕೊಂಡು

ಹೋಗಿರುತ್ತೇವೆ. 4 ವ್ಯಕಿಗಳನ್ನು ಚಾಸಾ-12 ರವರು ವಿಚಾರಣೆ ಮಾಡಿರುತ್ತಾರೆ ಅವರು ಕೂಲಂಕುಶವಾಗಿ ಡ್ರಾಪ್ ಕೊಡುತೀವಿ ಎಂದು ಸಾರ್ವಜನಿಕರಿಂದ ಮೊಬೈಲ್ ಗಳು ಮತ್ತು ಹಣವನ್ನು ತಗೊಂಡಿರುವ ವಿಷಯವನ್ನು ಒಪ್ಪಿಕೊಂಡಿರುತ್ತಾರೆ. ಚಾಸಾ-12 ರವರು ಗ್ರಾಮಾಂತರ ಪೊಲೀಸ್ ಠಾಣೆಗೆ ಸಬ್ ಇನ್ಸ್ ಪೆಕ್ಟರ್ ಮುಂದೆ ಮಹೇಶ್, ಶಶಿಭೂಷಣ್, ಗೋಪಾಲ್ ಮತ್ತು ನರಸಿಂಹ ರವರನ್ನು ಹಾಜರು ಪಡಿಸಿ ವರದಿ ಮಾಡುತ್ತೇನೆ ಎಂದು ನನಗೆ ತಿಳಿಸಿರುತ್ತಾರೆ.

ಪಾಟೀ ಸವಾಲು- ಶ್ರೀ ಎಂ ಕೆ ವೈ ವಕೀಲರಿಂದಃ 1 ನೇ ಆರೋಪಿಯ ಪರವಾಗಿ

ದಿಃ 23-03-2017 ರಂದು ನನ್ನನ್ನು ಚಾಸಾ-12 ರವರು ಬಂದೋಬಸ್ತ್ ಮಾಡಿರುವ ನೇಮಕ ಮಾಡಿಕೊಂಡಿರುವ ವಿಷಯವನ್ನು ಬೀಟ್ ಪುಸ್ತಕದಲ್ಲಿ ಬರೆದಿದೀರಾ ಎಂದರೆ ಸಾಕ್ಷಿ ಚೆಕ್ ಪಾಯಿಂಟ್ ಪುಸ್ತಕದಲ್ಲಿ ಬರೆದಿದೀನಿ ಎನ್ನುತ್ತಾರೆ. ನನ್ನನ್ನು 3 ಜನ ಪಿ.ಸಿಗಳಾದ ಚಾಸಾ-8, 10, 12 ರವರನ್ನು ನೇಮಕ ಮಾಡಿಕೊಂಡಿರುತ್ತಾರೆ. ಕೆ.ಬಿ ಕ್ರಾಸ್ ವೃತ್ತದಲ್ಲಿ ಗಸ್ತು ಮಾಡುವ ಸ್ಥಳದಲ್ಲಿ ಬ್ಯಾರಿಕ್ಯಾಡನ್ನು ಹಾಕಿರುತ್ತೇವೆ ಎಂದರೆ ಸರಿ. ಸದರಿ ಸರ್ಕಲ್ 4 ತಾಲೂಕುಗಳು ಸಂಪರ್ಕಿಸುವ ಸರ್ಕಲ್ ಎಂದರೆ ಸರಿ. ಅದರ ಪಕ್ಕದಲ್ಲಿ ಪೆಟ್ರೋಲ್ ಬಂಕ್ ಇದೆ ಎಂದರೆ ಸರಿ. ಅಲ್ಲಿ ಇರುವ ಅಂಗಡಿಗಳು, ಮೆಡಿಕಲ್ ಸ್ಟೋರ್ ಮತ್ತು ಪೆಟ್ರೋಲ್ ಬಂಕ್ ನಲ್ಲಿ ಸಿಸಿಟಿವಿ ಗಳನ್ನು ಅಳವಡಿಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಪೆಟ್ರೋಲ್ ಬಂಕ್ ನಲ್ಲಿ ಹಿಂದೆ ಹಣ ಕಳ್ಳತನವಾಗಿರುವ ವಿಷಯವನ್ನು ಸಿಸಿಟಿವಿ ಮೂಲಕ ಕಂಡು ಹಿಡಿದಿರುತ್ತೇವೆ ಎಂದರೆ ಸರಿಯಲ್ಲ. ಯಾವ್ಯಾವ ವಾಹನಗಳನ್ನು ತಪಾಸಣೆ ಮಾಡಿದೀವಿ ಎಂದ ನಮ್ಮ ಮೇಲಾಧಿಕಾರಿಗಳಿಗೆ ವರದಿಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ಚೆಕ್ ಪಾಯಿಂಟ್ ಪುಸ್ತಕದಲ್ಲಿ ಬರೆದಿದೀವಿ ಎನ್ನುತ್ತಾರೆ. ಅದರ ಬಗ್ಗೆ ವರದಿಯನ್ನು ನೀಡಿರುತ್ತೇನೆ. ಆ ದಿನ ಇಂಡಿಕಾ ಕಾರು ಚಿಕ್ಕನಾಯಕಹಳ್ಳಿಯಿಂದ ಬರುತ್ತಿತ್ತು ಸದರಿ ಕಾರನ್ನು 1 ನೇ ಆರೋಪಿಯವರು ಬೆಳಗಿನ ಜಾವ ಚಾಲನೆ ಮಾಡುತ್ತಿದ್ದರು. ವಿಚಾರಣೆ ಮಾಡಲು ಉಪ ನಿರೀಕ್ಷಕರು ಚಾಸಾ-12 ರವರು ಕೆ.ಬಿ ಕ್ರಾಸ್ ಠಾಣೆಗೆ ಆರೋಪಿಗಳನ್ನು ಕರೆದುಕೊಂಡು ಬಂದಿರುತ್ತಾರೆ. ಕಾರನ್ನು ತಪಾಸಣೆ ಮಾಡುವಾಗ ಡ್ರೈವರ್ ಸೀಟ್ ನಲ್ಲಿ 1 ನೇ ಆರೋಪಿಯವರು ನಿಂತಿದ್ದರು ಮತ್ತು 3 ಜನ ಆರೋಪಿಯವರು ಎಲ್ಲೆಲ್ಲಿ ಕೂತಿದ್ದರು ಎಂದು ನನಗೆ ಹೇಳಲು ಸಾಧ್ಯ ಇಲ್ಲ. ಅದನ್ನು ಬಿಟ್ಟರೆ ಬೇರೆ ಏನೂ ಕಾರಿನಲ್ಲಿ ಇರಲಿಲ್ಲ. ನಾನು ಯಾವುದೇ ವಾಹನಗಳನ್ನು ತಪಾಸಣೆ ಮಾಡಿಲ್ಲ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿತಾ ಇದ್ದೀನಿ ಎಂದರೆ ಸರಿಯಲ್ಲ. ನಾನು ಆರೋಪಿಗಳನ್ನು ಕೆ.ಬಿ ಕ್ರಾಸ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿಲ್ಲ ಠಾಣೆಯ ಅಂಕಿ ಅಂಶಕ್ಕೋಸ್ಕರ ಸುಳ್ಳು ಸಾಕ್ಷ್ಯ ನುಡಿತಾ ಇದ್ದೀನಿ ಎಂದರೆ ಸರಿಯಲ್ಲ.

ಪಾಟೀ ಸವಾಲು- ಶ್ರೀ ಎಂ ಬಿ ಕೆ ವಕೀಲರಿಂದಃ 2 ನೇ ಆರೋಪಿಯ ಪರವಾಗಿ

ಮಯೂರ ಹೋಟೆಲ್ ಮತ್ತು ಮಾರ್ಥ ಹೋಟೆಲ್ ಹತ್ತಿರ ಸಿಸಿಟಿವಿ ಇದೆ ಕಾರುಗಳು ಓಡಾಡಿರುವ ಬಗ್ಗೆ ಏನಾದರೂ ಪರಿಶೀಲನೆ ಮಾಡಿದೀರಾ ಎಂದರೆ ನಾನು ಮಾಡಿರುವುದಿಲ್ಲ ಚಾಸಾ-12 ರವರನ್ನು ಕೇಳಬೇಕು ಎನ್ನುತ್ತಾರೆ. ಕೆ.ಬಿ ಕ್ರಾಸ್ ಸರ್ಕಲ್ ನಲ್ಲಿ ನನ್ನ ಸಮಕ್ಷಮದಲ್ಲಿ ಚಾಸಾ-12 ರವರು ಇಂಡಿಕಾ ಕಾರನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಅಮಾನತ್ತು ಮಹಜರ್ ಗೆ ಯಾರ್ಯಾರು ಸಹಿ ಮಾಡಿರುತ್ತಾರೆ ಎಂದು ಪ್ರಶ್ನಿಸಿದಾಗ ಚಾಸಾ-8, 12, 11 ರವರು ಸಹಿ ಮಾಡಿರುತ್ತಾರೆ. ಸಾರ್ಜನಿಕರು ಕೂಡ ಸಹಿ ಮಾಡಿದರು ಅವರ ಹೆಸರು ಈಗ ನೆನಪಿಲ್ಲ. ಎಷ್ಟು ಸಮಯಕ್ಕೆ ಅಮಾನತ್ತು ಪಂಚನಾಮೆ ಬರೆದಿರುತ್ತೇವೆ ಎಂದು ಈಗ ನನಗೆ ನೆನಪಿಲ್ಲ. ಅಲ್ಲಿ ಯಾವುದೇ ಕಾರನ್ನು ವಶಕ್ಕೆ ತಗೊಂಡಿಲ್ಲ, ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳುಳ ಸಾಕ್ಷ್ಯನುಡಿತಾ ಇದ್ದೀನಿ ಎಂದರೆ ಸರಿಯಲ್ಲ.

4 ನೇ ಆರೋಪಿಯ ಪರ ವಕೀಲರು 1 ಮತ್ತು 2 ಆರೋಪಿಯ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.